ಕೃಷಿ ವಿಶ್ವ ವಿದ್ಯಾನಿಲಯ
ಕೃಷಿ ಹವಾಮಾನ ವಿಭಾಗ
ಜಿ.ಕೆ.ವಿ.ಕೆ., ಬೆಂಗಳೂರು–560065
* ಗ್ರಾಮೀಣ ಕೃಷಿ ಹವಾಮಾನ ಸೇವಾ ವರದಿ ಪತ್ರಿಕೆ *

ದಿನಾಂಕ: 06-12-2016

ಬೆಂಗಳೂರು ನಗರ ಜಿಲ್ಲೆಗೆ ಸೀಮಿತವಾಗಿದೆ

ಈ ವಾರದ ಮುನ್ಸೂಚನೆ (ದಿನಾಂಕ 07.12.16 –11.12.16 ವರೆಗೆ)

	07.12.2016	08.12.2016	09.12.2016	10.12.2016	11.12.2016
ಮಳೆ (ಮಿ ಮಿ)	0	0	0	0	0
ಗರಿಷ್ಠ ಉಷ್ಣಾಂಶ(ಡಿ.ಸೆ.)	28	28	28	28	27
ಕನಿಷ್ಠ ಉಷ್ಣಾಂಶ (ಡಿ.ಸೆ.)	18	17	17	16	16
ಮೋಡ (ಪ್ರಮಾಣ)	2	8	7	8	7
ಆರ್ದ್ರತೆ ೭.೨೦ ಬೆ (ಶೇ)	91	69	58	53	56
ಆರ್ದ್ರತೆ ೨.೨೦ ಮ (ಶೇ)	44	30	32	28	26
ಗಾಳಿಯ ವೇಗ (ಕಿ.ಮಿ/ಗಂಟೆಗೆ)	8	6	6	8	7
ಗಾಳಿಯ ದಿಕ್ಕು (ಡಿಗ್ರಿ)	30	40	310	290	290

ಮುಂಬರುವ 5 ದಿನಗಳಲ್ಲಿ ಮಳೆಯಾಗುವ ಸಂಭವ ಕಡಿಮೆ. ದಿನದ ಗರಿಷ್ಠ ಉಷ್ಣಾಂಶ **27.0–28.0°** ಸೆ ಮತ್ತು ಕನಿಷ್ಠ **16.0-18.0°** ಸೆ ಇರುವ ಸಾಧ್ಯತೆ ಇದೆ. ಬೆಳಿಗಿನ ಆರ್ದ್ರತೆ ಪ್ರಮಾಣ ಶೇ **53-91 % %** ಇದ್ದು ಮಧ್ಯಾಹ್ನ **26–44 %** ಇರುವುದು ಮತ್ತು ಗಾಳಿಯು ಗಂಟೆಗೆ ಸರಾಸರಿ **6-8** ಕಿ.ಮೀ. ವೇಗದಲ್ಲಿ ಬೀಸುವ ಸ0ಭವವಿದೆ.

ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

ಬೆಳೆಗಳು	ಹವಾಮಾನ ಆಧಾರಿತ ಕೃಷಿ ಸಲಹೆಗಳು
ತೊಗರಿ	➢ ಕಟಾವು ಮಾಡುವುದಕ್ಕೆ ಇದು ಸೂಕ್ತ ಕಾಲ. ಕಟಾವು ಮಾಡಿ ಬಿಸಿಲಿನಲ್ಲಿ ಒಣಗಿಸಿ, ಒಕ್ಕಣೆ ಮಾಡಿ ಕಾಳುಗಳನ್ನು ಬೇರ್ಪಡಿಸಿ ಚೀಲದಲ್ಲಿ ತುಂಬಿರಿ.
ರಾಗಿ	➢ ಕಟಾವು ಮಾಡುವುದಕ್ಕೆ ಇದು ಸೂಕ್ತ ಕಾಲ ಮತ್ತು ಕಟಾವಾದ ಬೆಳೆಗಳನ್ನು ಒಗ್ಗೂಡಿಸಿ ಮೆದೆಹಾಕುವುದು ಸೂಕ್ತ.
ತೋಟಗಾರಿಕೆ	
ಮಾವು	➢ ಸಸ್ಯ ಸಂರಕ್ಷಣಾ ಸಿಂಪರಣೆಯನ್ನು ಮಾಡುವುದು ಸೂಕ್ತ. ➢ ಇನ್ನು ಮುಂದೆ ಮೂಡುವ ಹೂ ಗೊಂಚಲುಗಳಿಗೆ ಸೂಕ್ತ ಸಸ್ಯ ಸಂರಕ್ಷಣಾ ಕ್ರಮಗಳನ್ನು ಅನುಸರಿಸಿ ಕಾಪಾಡಬೇಕು. ➢ ಮರಗಳ ಬುಡದ ಪಾತಿಗಳನ್ನು ಸ್ವಚ್ಚಗೊಳಿಸಿ ಲಾಂಟಾನ ಮುಂತಾದ ಕಳೆ ಸಸ್ಯಗಳಿದ್ದರೆ ಬೇರು ಸಮೇತಕಿತ್ತುತೆಗೆಯಬೇಕು. ➢ ಅದರ ಜೊತೆಗೆ ಮರಗಳಲ್ಲಿ ಕಣ್ಣಾಡಿಸಿ ಪರಾವಲಂಬಿ ಸಸ್ಯಗಳಾದ ಬದನಿಕೆ (ಕಸ್ಕ್ಯುಟ, ಲೊರಾಂಥಸ್) ಮುಂತಾದುವುಗಳನ್ನು ಸವರಿತೆಗೆಯಬೇಕು.ಅಧಿಕ ಸಾಂದ್ರತೆ ನೆಡುವಿಕೆಯಲ್ಲಿಕಾಂಡ ಪರಾವಲಂಬಿ ಸಸ್ಯಗಳ ಹಾವಳಿ ಜಾಸ್ತಿಯಿರುತ್ತದೆ.
ದ್ರಾಕ್ಷಿ	➢ ದ್ರಾಕ್ಷಿಬಳ್ಳಿಗಳ ಸವರುವಿಕೆಯನ್ನು ಕೈಗೊಳ್ಳಿ. ➢ ದ್ರಾಕ್ಷಿಯಲ್ಲಿಬೂದಿ ರೋಗದ ಹಾವಳಿ ಉಂಟಾಗುವ ಸಾಧ್ಯತೆಇರುವುದರಿಂದಅದರ ಹತೋಟಿಗೆ ನೀರಿನಲ್ಲಿಕರಗುವಗಂಧಕವನ್ನು ಸಿಂಪಡಿಸುವುದು ಸೂಕ್ತ.
ಜಾನುವಾರು	
ಹೈನುಗಾರಿಕೆ	➢ ಜಾನುವಾರು, ರೇಷ್ಮೆ ಹಾಗೂ ಕೋಳಿ ಸಾಕಣೆ ಕೊಠಡಿಯ ಉಷ್ಣಾಂಶದ ಸ್ಥಿರತೆಯನ್ನು ಕಾಪಾಡಿಕೊಳ್ಳುವುದು. ➢ ಕೊಟ್ಟಿಗೆಯನ್ನು ಶುಚಿಯಾಗಿ ಇಟ್ಟುಕೊಳ್ಳುವುದು ಮತ್ತು ಜಾನುವಾರುಗಳನ್ನು ಚಳಿಗಾಳಿಯಿಂದ ರಕ್ಷಿಸಬೇಕು.

ನೋಡಲ್ ಅಧಿಕಾರಿ:
ಕೃ.ವಿ.ವಿ, ಜಿ.ಕೆ.ವಿ.ಕೆ
ಬೆಂಗಳೂರು